


ಎಡದಿಂದ ಬಲಕ್ಕೆ:

1. ಮುಸು ಮುಸು ನಕ್ಕಿದ್ದಕ್ಕೆ ಇಷ್ಟೊಂದು ಕೋಪವೇ? (3)
3. ಹೊರಿಸಿ ಹೊರಿಸಿ ಕಳುಹಿದವನ ನಾಮಧೇಯ ಗೊತ್ತೇ? (3)
4. ಈ ಕುಲುಮೆಯ ಒಡೆಯ ಯಾರು? (3)
6. ವಧುವಿನ ಮನೆಯ ಬಳಿಯೇ 'ಜೇನಿನ ತೋಟ' (4)
7. ಆ ಪರದೆ ಹಾರಿಹೋದರೆ ವಿಷ್ಣುವಿನ ಹೆಜ್ಜೆ ಕಂಡೀತು (4)
9. ಹಾವನ್ನ ಹಿಡಿಯ ಬಂದವನ ನವೀನ ವಾಹನ ನೋಡಿ (4)
11. ನೀರಿಗಾಗಿ ಇಲ್ಲಿ ಯಾವ ಉಪಾಯವೂ ಇಲ್ಲ (4)
15. ನಭವನ್ನೇ ಮುಟ್ಟುವಂತೆ ನಿರ್ಮಿತ ನಿವಾಸ (3)
16. ಶಾಮಣ್ಣನ ನೋವೆಲ್ಲ ನಿವಾರಣೆಯಾಯಿತು (3)
17. ರಗಳೆಯನ್ನು ಬಿಡಿಸಲು ನೆರವಾದ ಮಿತ್ರ (3)

ಮೇಲಿಂದ ಕೆಳಕ್ಕೆ:

1. ಮರೆಯಲಾಗುವುದೇ ನಿನ್ನನ್ನು ಕೃಷ್ಣ (3)
2. ಮಾರುದ್ದ ಹೌದು– ಸ್ವಲ್ಪವೇ ಹೆಚ್ಚುಕಡಿಮೆ (3)
3. ಹವಳ ಸಂಗ್ರಾಹಕನಾದರೂ ಕಾಲುಗಳಿಲ್ಲ (3)
5. ಕಾಸು ತೋರಿಸಿದಾಗ ಕಂಡದ್ದು ಸುವಾಸನಾ ವಸ್ತು (3)
6. ಮೂರು ದನಿ ತೆಗೆದದ್ದಕ್ಕೆ ಬಡಿದು ಹಾಕುವುದೇ? (3)
8. ದಡ್ಡರನ್ನು ಭಯಪಡಿಸಿದ ಭಾರೀ ಆಳು (3)
10. ಗದ್ದೆಯಿಂದ ಹೊರಬಂತು ನೋಡಿ, ಕತ್ತೆ (3)
12. ಜನರನ್ನು ಕಾಡುವಂಥದ್ದೇ– ರೋಗದ ಜೊತೆಗಾರ (3)
13. ಹಗಲನ್ನು ಕಂಡೊಡನೆ ಹೂವಿನಂಥ ಮಂದಹಾಸ (3)
14. ಯಾರನ್ನೂ ಆಶ್ರಯಿಸಬಾರದೆಂಬ ಆಸೆ, ಹಂಬಲ (3)

## ಪದಬಂಧ: 20-5-2010ರ ಉತ್ತರಗಳು

ಎಡದಿಂದ ಬಲಕ್ಕೆ: 1. ಅನುಗ್ರಹ; 3. ಸಮೀರ; 4. ತಾರೀಕು; 6. ಗುಡಿಕಾರ; 7. ಕಲಹ; 9. ಸಕಲ; 11. ಶಹರ; 13. ಸುಮನ; 15. ಗತಕಾಲ; 17. ಗುರಾಣಿ; 18. ಹವನ; 19. ತರಕಾರಿ.

ಮೇಲಿಂದ ಕೆಳಕ್ಕೆ: 1. ಅರಗು; 2. ಹತಾರ; 3. ಸಡಿಲ; 5. ಕುಡಕ; 7. ಕರ್ಕಶ; 8. ಹಮ್ಮೀರ; 9. ಸಲೀಸು; 10. 'ಲಕುನ' (ನಕುಲ ತಲೆಕೆಳಗು); 12. ಹಡಗು; 14. ಮಲಿನ; 15. ಗಣಿತ; 16. ಲಹರಿ.

# ಗಜ ಗಜಾಂತರ

## ಆನೆ ವಿಧ- ಏನೇನು ಭೇದ?

ಆನೆ. ಅದು ಧರೆಯ ಅತಿ ದೊಡ್ಡ ನೆಲವಾಸಿ ಪ್ರಾಣಿ. ಭಾರೀ ಗಾತ್ರದಿಂದ, ವಿಪರೀತ ಶಕ್ತಿಯಿಂದ, ವಿಶಾಲ ಕಿವಿಗಳಿಂದ, ದಂತ– ಸೊಂಡಿಲುಗಳ ವೈಲಕ್ಷಣ್ಯಗಳಿಂದ... ಹಾಗೆಲ್ಲ ಇದ್ದೂ ಸಾಕುಪ್ರಾಣಿಯಾಗಬಲ್ಲ, ಕಿಂಕರನಾಗಿರಬಲ್ಲ ಗುಣಗಳಿಂದ ಆನೆ ತುಂಬ ಆಕರ್ಷಕ, ತುಂಬ ವಿಶಿಷ್ಟ. ಜೊತೆಗೆ ಬಹು ಭಾವುಕ ಸ್ವಭಾವಕ್ಕೂ, ಅಪಾರ ಸ್ಮರಣಶಕ್ತಿಗೂ ಆನೆ ಬಹಳ ಪ್ರಸಿದ್ಧ.

ಪ್ರಸ್ತುತ ಜಗದಲ್ಲಿ ಆನೆಗಳ ನೈಸರ್ಗಿಕ ನೆಲೆ ಆಫ್ರಿಕಾ ಮತ್ತು ಏಷಿಯ– ಇವೆರಡೇ ಭೂ ಖಂಡಗಳಿಗೆ ಸೀಮಿತ. ಅದನ್ನು ಅನುಸರಿಸಿಯೇ ಆನೆ ಪ್ರಭೇದಗಳವು ಎರಡು ವಿಧ: 'ಆಫ್ರಿಕಾದ ಆನೆ (ಲೋಕ್ಸೋಡಾಂಟಾ ಆಫ್ರಿಕಾನಾ) ಮತ್ತು ಏಶಿಯದ ಆನೆ (ಎಲಿಫಾಸ್ ಮ್ಯಾಕ್ಸಿಮಸ್)' ಈ ದ್ವಿವಿಧ ಆನೆಗಳ ಬಾಹ್ಯ ಶಾರೀರಿಕ ಲಕ್ಷಣಗಳ ನಡುವಣ ಅಂತರಗಳು ಹಲವಾರು. ಪ್ರಧಾನ ವ್ಯತ್ಯಾಸಗಳು:

ಆಫ್ರಿಕಾದ ಆನೆಗಳು ತೂಕದಲ್ಲಿ, ಗಾತ್ರದಲ್ಲಿ, ಎತ್ತರದಲ್ಲಿ ಏಷಿಯನ್ ಆನೆಗಳಿಗಿಂತ ದೊಡ್ಡವು. ಆಫ್ರಿಕಾದ ಆನೆಗಳದು ನಾಲ್ಕರಿಂದ ಏಳು ಟನ್ ತೂಕ; ಹತ್ತರಿಂದ ಹದಿಮೂರು ಅಡಿ ಎತ್ತರ. ಏಷಿಯದ ಆನೆಗಳು ಮೂರರಿಂದ ಐದು ಟನ್ ತೂಗುತ್ತವೆ; ಆರೂವರೆಯಿಂದ ಹನ್ನೊಂದೂವರೆ ಅಡಿ ಎತ್ತರ ನಿಲ್ಲುತ್ತವೆ.





ಆಫ್ರಿಕನ್ ಆನೆಗಳದು ಬಹಳ ಸುಕ್ಕುಸುಕ್ಕಾದ ಚರ್ಮ. ತದ್ವಿರುದ್ಧವಾಗಿ ಏಷಿಯನ್ ಆನೆಗಳದು ನಯವಾದ ಚರ್ಮ. ಆಫ್ರಿಕನ್ ಆನೆಗಳ ಬೆನ್ನು ತಗ್ಗಿದ್ದರೆ ಏಷಿಯನ್ ಆನೆಗಳದು ಉಬ್ಬಿದ ಅಥವಾ ಮಟ್ಟಸವಾದ ಬೆನ್ನು.

ಆಫ್ರಿಕನ್ ಆನೆಗಳ ಗಂಡು– ಹೆಣ್ಣು ಎರಡರಲ್ಲೂ 'ದಂತ'ಗಳು ಬೆಳೆಯುತ್ತವೆ. ಆದರೆ ಈ ಜೋಡಿ ದಂತ ಅಲಂಕಾರ ಏಶಿಯನ್ ಆನೆಗಳಲ್ಲಿ ಗಂಡುಗಳಿಗೆ ಮಾತ್ರ.

ಆಫ್ರಿಕನ್ ಆನೆಗಳ ಸೊಂಡಿಲಿನಲ್ಲಿ 'ಉಂಗುರ'ಗಳು ಬಹಳ ಹೆಚ್ಚು, ಹಾಗಾಗಿ ಬಳುಕುವ ಸುತ್ತಿಕೊಳ್ಳುವ ಸಾಮರ್ಥ್ಯವೂ ಅಧಿಕ. ಏಷಿಯನ್ ಆನೆ ಸೊಂಡಿಲಿನಲ್ಲಿ 'ಉಂಗುರ' ಕಡಿಮೆ, ಬಳುಕುವ ಶಕ್ತಿಯೂ ಕಡಿಮೆ. ಆಫ್ರಿಕನ್ ಆನೆ ಸೊಂಡಿಲ ತುದಿಯಲ್ಲಿ ಎರಡು 'ಬೆರಳು'ಗಳಿದ್ದರೆ ಏಷಿಯನ್ ಆನೆ ಸೊಂಡಿಲ ತುದಿಯಲ್ಲಿ ಒಂದೇ ಬೆರಳು.

ಆಫ್ರಿಕನ್ ಆನೆಯ ಮುಂಗಾಲುಗಳಲ್ಲಿ ನಾಲ್ಕು ಅಥವಾ ಐದು ಉಗುರುಗಳು; ಹಿಂಗಾಲುಗಳಲ್ಲಿ ಬೆರಳು– ಉಗುರುಗಳು ಮೂರು, ನಾಲ್ಕು ಅಥವಾ ಐದು. ಅದೇ ಏಶಿಯನ್ ಆನೆಯ ಪಾದದ ಉಗುರುಗಳು ಮುಂಗಾಲುಗಳಲ್ಲಿ ಐದೈದು; ಹಿಂಗಾಲುಗಳಲ್ಲಿ ನಾಲ್ಕು ಅಥವಾ ಐದು.

■ ಎನ್. ವಾಸುದೇವ್